ಅ) ಇವರಲ್ಲಿ ವಸತಿ, ಹೀನರ, ಭೂಹೀನರ, ನಿವೇಶನರಹಿತ ಸಂಖ್ಯೆ ಎಷ್ಟು;

ಇ) ಇವರಿಗೆ ವಸತಿ ನಿರ್ಮಿಸಿಕೊಡಲು ಸರ್ಕಾರವು ಉದ್ದೇಶಿಸಿದೆಯೇ? ಹಾಗಿದ್ದಲ್ಲಿ ಯಾವಾಗ ಕಾರ್ಯಕ್ರಮ ಹಮ್ಮಿಕೊಳ್ಳುವುದು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಮೀನುಗಾರರ ಸಂಖ್ಯೆ - 3359 ಇವರು ಬೆಸ್ತ, ಗಂಗಾಮತದಸ್ಥ ಹಾಗೂ ತಿಗಳರ ಉಪಜಾತಿಗೆ ಸೇರಿದರವರಾಗಿದ್ದು ಇವರು ಆರ್ಥಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗದವರಾಗಿರುತ್ತಾರೆ.

ಆ) ಇವರಲ್ಲಿ ಸುಮಾರು 1250 ವಸತಿ ಹೀನರಾಗಿರುತ್ತಾರೆ ಮತ್ತು 1050 ಜನರು ನಿವೇಶನ ಇಲ್ಲದವರಾಗಿರುತ್ತಾರೆ. ಭೂಹೀನ ಬಗ್ಗೆ ಮಾಹಿತಿ ಲಭ್ಯವಿರುವುದಿಲ್ಲ.

ಇ) ರಾಷ್ಟ್ರೀಯ ಮೀನುಗಾರರ ಕಲ್ಯಾಣ ನಿಧಿ ಯೋಜನೆಯಲ್ಲಿ ಹಾಗೂ ಹುಡ್ಕೋ ಸಂಸ್ಥೆಯ ನೆರವಿನಿಂದ ಮುಂದಿನ ವರ್ಷಗಳಲ್ಲಿ ಸಾಧ್ಯವಾದಷ್ಟು ವಸತಿಗಳನ್ನು ಅರ್ಹವುಳ್ಳ ವಸತಿ ರಹಿತ ಮೀನುಗಾರರಿಗೆ ಹಂತ ಹಂತವಾಗಿ ಒದಗಿಸಿ ಕೊಡಲಾಗುವುದು.

ನಾಗಪುರ ಯೋಜನೆ ಬಗ್ಗೆ

160 (481) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಲೋಕೋಪಯೋಗಿ ಸಚಿವರು ತಾ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ನಾಗಾಪುರ ಪ್ಲಾನ್ (ಯೋಜನೆ) ಅಂದರೇನು? ಈ ಯೋಜನೆಯನ್ನು ಎಂದಿನಂತೆ ಜಾರಿಯಲ್ಲಿ ತರಲಾಗಿದೆ? ಈ ಯೋಜನೆ ಪ್ರಕಾರ ಪ್ರತಿಯೊಂದು ಹೆದ್ದಾರಿಯ ಪ್ರತಿ ವರ್ಷ ವಾರ್ಷಿಕ ನಿರ್ವಹಣೆಗಾಗಿ ಎಷ್ಟು ಹಣ ವೆಚ್ಚ ಮಾಡಲಾಗುತ್ತಿದೆ? ಪ್ರತಿಯೊಂದು ಹೆದ್ದಾರಿ ಎಷ್ಟು ಅಗಲವಾಗಿರಬೇಕೆಂದು ಸರ್ಕಾರ ಸೃಷ್ಟಿಸಿದೆ? ಈ ಅಗಲ ಅತೀಕ್ರಮಣ ಮಾಡಿದ್ದರೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಆ) ಈ ಹೆದ್ದಾರಿಗಳು ನಗರ, ಪಟ್ಟಣ ಮತ್ತು ಗ್ರಾಮಗಳ ಮುಖಾಂತರ ಹಾದಿದ್ದು, ಹೆದ್ದಾರಿ ಅಗಲವನ್ನು ಅತಿಕ್ರಮಿಸಿದರೆ ಸ್ಥಳಾಂತರಿಸಲು ಸರ್ಕಾರ ಸ್ಪಷ್ಟ ಸೂಚನೆಗಳನ್ನು ನೀಡಿದೆಯೇ.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ದೇಶದ ಮುಖ್ಯ ಇಂಜಿನಿಯರುಗಳು ನಾಗಪುರದಲ್ಲಿ 1943 ರಲ್ಲಿನ ಸಭೆಯಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ನಾಗಪುರ ಯೋಜನೆ ಎಂದು ಕರೆಯಲಾಗಿದೆ.

ಇದರ ನಂತರ ಮುಂಬೈ ಯೋಜನೆ ಹಾಗೂ 1981-2001 ರಸ್ತೆ ಅಭಿವೃದ್ಧಿ ಯೋಜನೆ ರಚಿಸಲಾಗಿದೆ. ಈ ಯೋಜನೆಯನ್ನು 1941 ರಿಂದ 1961 ರವರೆಗಿನ 2 ದಶಕಗಳಿಗಾಗಿ ಸಿದ್ಧಪಡಿಸಲಾಗಿತ್ತು. ಈ ಯೋಜನೆಯ ನಂತರ ಇಂತಹವೇ ಇನ್ನೆರಡು ಯೋಜನೆಗಳು ಅಂದರೆ ''ಮುಂಬಯಿ ಯೋಜನೆ'' ಹಾಗೂ ಲಕ್ನೋ ಯೋಜನೆ'' ಗಳು ಇವುಗಳನ್ನು 1961 ರಿಂದ 1981 ಕ್ಕಾಗಿ ಹಾಗೂ 1981 ರಿಂದ 2001 ಕ್ಕಾಗಿ ಹಮ್ಮಿಕೊಳ್ಳಲಾಗಿತ್ತು. ರಸ್ತೆಗಳ ನಿರ್ವಹಣೆಗಾಗಿ ಕೇಂದ್ರ ಸಾರಿಗೆ ಮಂತ್ರಾಲಯ ಹಾಗೂ ಆರ್ಥಿಕ ಆಯೋಗ ವೆಚ್ಚವನ್ನು ನಿರ್ಧರಿಸುತ್ತದೆ.

ರಾಜ್ಯ ಸರ್ಕಾರವು ನಿರ್ವಹಣೆಗಾಗಿ ಈ ಕೆಳಗಿನಂತೆ ಮೊತ್ತವನ್ನು ನಿಗಧಿಪಡಿಸುತ್ತದೆ:-

1) ರಾಜ್ಯ ಹೆದ್ದಾರಿಗಳು ಪ್ರತಿ ಕಿ. ಮೀ. ಗೆ ರೂ. 25,000
2) ಜಿಲ್ಲಾ ಮುಖ್ಯ ರಸ್ತೆಗಳು ಪ್ರತಿ ಕಿ.ಮೀ. ಗೆ ರೂ. 22,000

ರಸ್ತೆ ಭೂಮಿಯ ಅಗಲ ಕೆಳಕಂಡಂತೆ ಐ. ಆರ್. ಸಿ. ನಿಗಧಿಪಡಿಸಿದೆ.

ರಾಷ್ಟ್ರೀಯ ಹೆದ್ದಾರಿ	80 ಕಿ.ಮೀ.
ರಾಜ್ಯ ಹೆದ್ದಾರಿ	80 ಕಿ.ಮೀ.
ಜಿಲ್ಲಾ ಮುಖ್ಯ ರಸ್ತೆ	50 ಕಿ.ಮೀ.

ಸರ್ಕಾರದ ಹಾಲಿ ರಸ್ತೆ ಭೂಮಿಯನ್ನು ಅತಿಕ್ರಮಿಸಿದಲ್ಲಿ ಕಾನೂನಿನ ಪ್ರಕಾರ ತೆರವು ಮಾಡಿಸಲಾಗುತ್ತಿದೆ.

ಅ) ಹೌದು

ಖಾಸಗೀ ಐ. ಟಿ. ಐ. ಗಳಿಗೆ ಅನುದಾನ ಮಂಜೂರಾತಿ

161 (278) ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) ರಾಜ್ಯದ ಖಾಸಗೀ ಐ. ಟಿ. ಐ. ಗಳಿಗೆ ಅನುದಾನ ಮಂಜೂರಾತಿ ನೀಡಿ ಅದರಲ್ಲಿ ಸಿಬ್ಬಂದಿಯವರಿಗೆ ಸಂಬಳವನ್ನು ನೀಡಲಾಗುತ್ತಿದ್ದು ಇನ್ನುಳಿದ ಶೇಕಡ 25 ರಷ್ಟನ್ನು ಬರುವ ಹಣಕಾಸು ವರ್ಷದಿಂದ ಮಂಜೂರು ಮಾಡಲಾಗುತ್ತಿದೆಯೇ; ಹಾಗಿದ್ದಲ್ಲಿ ಕಾರಣವೇನು.

ಆ) ವೃತ್ತಿಗಳು ಒಮ್ಮೆ ಅನುದಾನಕ್ಕೆ ಒಳಪಟ್ಟ ಮೇಲೆ ಅಂತಹ ವೃತ್ತಿಗಳ ಹೆಚ್ಚುವರಿ ಘಟಕಗಳು ಶಾಶ್ವತ ಸಂಯೋಜನೆ ಪಡೆದು ಪುನ: 7 ವರ್ಷ ಅವಧಿಯನ್ನದೇ ತಕ್ಷಣ ಅಂತಹ ಘಟಕಗಳಿಗೂ ಅನುದಾನ ನೀತಿಗೆ ಒಳಪಡಿಸಲಾಗುವುದೆ. ಹಾಗಿಲ್ಲದಿದ್ದಲ್ಲಿ ಕಾರಣವೇನು;

ಇ) ರಾಜ್ಯದಲ್ಲಿ ಇನ್ನು ಮುಂದೆ ಸರ್ಕಾರಿ : ಖಾಸಗೀ ಐ. ಟಿ. ಐ. ಗಳನ್ನು ಪ್ರಾರಂಭಿಸುವ ವಿಚಾರವಿದೆಯೇ; ಹಾಗಿದ್ದಲ್ಲಿ ಈಗಿರುವ ಐ. ಟಿ. ಐ. ಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಯಾವ ಕ್ರಮಕೈಗೊಳ್ಳುತ್ತದೆ;

ಈ) ಅನುದಾನಕ್ಕೆ ಒಳಪಟ್ಟಿರುವ ಸುಮಾರು 2 ಸಾವಿರ ಸಿಬ್ಬಂದಿಯವರ ಹಿಂದಿನ ಸೇವೆಯನ್ನು ಪರಿಗಣಿಸಲಾಗುವುದೆ. ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಬಿ. ಸತ್ಯನಾರಾಯಣ (ಕಾರ್ಮಿಕ ರಾಜ್ಯ ಸಚಿವರು) :

ಅ) ಇಲ್ಲ

ಆ) ಇಲ್ಲ

ಇ) ಹೌದು , ಮುಂದಿನ ಸಾಲಿನಲ್ಲಿ (1998-99) 10 ಸರ್ಕಾರಿ ಐ. ಟಿ. ಐ. ಗಳನ್ನು ತೆರೆಯಲು